**ಎರಡನೇ ಅಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ.**

**ಉಪಸ್ಥಿತರು** - ಶ್ರೀ. ಕೆಂಚನಗೌಡ ಪಾಟೀಲ.ಬಿ.ಎ.ಎಲ್.ಎಲ್.ಬಿ.

2ನೇ ಅಪರ ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,

ದೇವನಹಳ್ಳಿ.

**ಅಪರಾಧಿಕ ಪ್ರಕರಣ ಸಂಖ್ಯೆಃ 3283/2015**

**ತೀರ್ಪಿನ ದಿನಾಂಕ 27ನೇ ಮಾರ್ಚ ಮಾಹೆ, 2026ನೇ ಇಸವಿ**

**ಪಿರ್ಯಾದಿ/ಗಳುಃ**

ಕರ್ನಾಟಕ ಸರ್ಕಾರವನ್ನು ಪ್ರತಿನಿದಿಸುವವರು
ಆರಕ್ಷಕ ಉಪನೀರಿಕ್ಷಕರು,
ವಿಶ್ವನಾಥಪುರ ಪೋಲಿಸ್ ಠಾಣೆ,
ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ-**

**ಆರೋಪಿ/ತರುಃ**

1. ಅಂಬರೀಶ್ ಬಿನ್ ನಾರಾಯಣಪ್ಪ,
ವಯಸ್ಸುಃ 38 ವರ್ಷ,
ವಾಸಃ ಮಾಯಸಂದ್ರ ಗ್ರಾಮ,
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಜಿಲ್ಲೆ.

2. ಅನೀಲ್ ಬಿನ್ ಕೃಷ್ಣಮೂರ್ತಿ,
ವಯಸ್ಸುಃ 22 ವರ್ಷ,
ವಾಸಃ ಕಾರಹಳ್ಳಿ ಗ್ರಾಮ,
ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ. ಅನೀಲಕುಮಾರ್.ವಿ - ವಕೀಲರು)

| | | | |
|---|---|---|---|
| 1. | ಅಪರಾಧ ಘಟಿಸಿದ ದಿನಾಂಕಃ | | 23-24/02/2015 |
| 2. | ಅಪರಾಧ ವರದಿಯಾದ ದಿನಾಂಕ | : | 23-24/02/2015 |
| 3. | ಫಿರ್ಯಾದುದಾರರ ಹೆಸರು | : | ಶ್ರೀ.ಮಹೇಶ ಕುಮಾರ |
| 4. | ಆರೋಪಿತರ ಬಂಧನದ ದಿನಾಂಕಃ | : | ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. |
| 5. | ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ | : | 24-10-2024 |
| 6. | ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ದಿನಾಂಕ | : | 06-03-2026 |
| 7. | ದೂರು ನೀಡಿದ ಅಪರಾಧದ ಕಲಮುಗಳು | : | ಎಂ.ಎಂ.ಡಿ.ಆರ್ ಕಾಯ್ದೆ 1957 ರ ಕಲಂ 4(1), 4(1ಎ), 21, 22 ಮತ್ತು ಭಾ.ದಂ.ಸಂ. ಕಲಂ. 379 |
| 8. | ನ್ಯಾಯಾಧೀಶರ ತೀರ್ಪಿನ ಅಭಿಪ್ರಾಯ | : | ಅಂತಿಮ ಆದೇಶದಂತೆ |
| 9. | ಫಿರ್ಯಾದುದಾರರ ಪರ ವಾದ ಮಂಡಿಸಿದವರು | : | ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು |
| 10. | ಆರೋಪಿತರ ಪರ ವಾದ ಮಂಡಿಸಿದವರು | : | ಶ್ರೀ.ಅನೀಲ್ ಕುಮಾರ - ವಕೀಲರು |

**2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವನಹಳ್ಳಿ.**

## ತೀರ್ಪು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಶ್ವನಾಥಪುರ ಆರಕ್ಷಕ ಠಾಣೆಯ ಸರಹದ್ದಿಗೆ ಸೇರಿದ ವಿಶ್ವನಾಥಪುರ ಆರಕ್ಷಕ ಠಾಣೆಯಲ್ಲಿ ದಾಖಲಾದ ಪ್ರಕರಣದ ಕುರಿತು ವಿಶ್ವನಾಥಪುರ ಆರಕ್ಷಕ ಠಾಣೆಯ ಆರಕ್ಷಕ ಉಪನೀರಿಕ್ಷಕರು ಆರೋಪಿತರ ವಿರುದ್ದ ಗಣಿ ಮತ್ತು ಖನಿಜ (ಅಭಿವೃದ್ದಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1ಎ), 21, 22 ಮತ್ತು ಭಾ.ದಂ.ಸಂ.ಕಲಂ.379ರ ಅಡಿಯಲ್ಲಿ ಆರೋಪಿತರು ಅಪರಾಧ ಮಾಡಿದ್ದಾರೆಂದು ಅವರ ವಿರುದ್ದ ಶಿಕ್ಷಾರ್ಹ ಅಪರಾಧಗಳಿಗಾಗಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿರುತ್ತದೆ.**

ದಿನಾಂಕ:23-24/02/2015 ರಂದು ಮದ್ಯರಾತ್ರಿ 12-15 ಗಂಟೆಯ ಸಮಯದಲ್ಲಿ ವಿಶ್ವನಾಥಪುರ ಆರಕ್ಷಕ ಠಾಣಾ ಸರಹದ್ದು, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಮಾಯಸಂದ್ರ-ಚಿಕ್ಕಗೊಲ್ಲಹಳ್ಳಿ ರಸ್ತೆ ಸ್ಮಶಾನದ ಬಳಿ ಆರೋಪಿತರು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಗ್ರಾವೆಲ್ ಮರಳನ್ನು ಕಳ್ಳತನದಿಂದ ಟಿ.ಎನ್-64-ಬಿ-7434 ಲಾರಿಯಲ್ಲಿ ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದ ಸಮಯದಲ್ಲಿ ಚಾಸಾ-1ರವರು ಚಾಸಾ-2 ರಿಂದ ಚಾಸಾ-5 ರವರ ಜೊತೆಯಲ್ಲಿ ದಾಳಿ ಮಾಡಿ 2ನೇ ಆರೋಪಿತನನ್ನು ಮತ್ತು ಲಾರಿಯನ್ನು ಪಂಚರ ಮತ್ತು ಸಿಬ್ಬಂದಿಯೊಂದಿಗೆ ವಶಕ್ಕೆ ಪಡೆದು ಚಾಸಾ-1 ರವರು ಠಾಣೆಗೆ ಬಂದು ನೀಡಿದ ಜ್ಞಾಪನದ ಮೇರೆಗೆ ಪ್ರಕರಣದ ದಾಖಲಾಗಿರುತ್ತೆಂದು. ಆರೋಪಿಗಳು ಮಾಯಸಂದ್ರ-ಚಿಕ್ಕಗೊಲ್ಲಹಳ್ಳಿ ರಸ್ತೆ ಸ್ಮಶಾನದ ಬಳಿ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಗ್ರಾವೆಲ್ ಮರಳನ್ನು ಸದರಿ ಲಾರಿಯಲ್ಲಿ ಸಾಗಾಣಿಕೆ ಮಾಡುತ್ತಿರುತ್ತಾರೆಂದು, ಈ ಮೂಲಕ ಗಣಿ ಮತ್ತು ಖನಿಜ (ಅಭಿವೃದ್ದಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1ಎ), 21, 22

ಮತ್ತು ಭಾ.ದಂ.ಸಂ. ಕಲಂ.379 ರಡಿಯಲ್ಲಿ ಆರೋಪಿತರು ಅಪರಾಧವನ್ನು ಎಸಗಿರುತ್ತಾರೆಂದು ಅಪಾಧಿಸಲಾಗಿರುತ್ತದೆ.

**3.** ಚಾಸಾ-1 ರವರು ಆರೋಪಿತರ ವಿರುದ್ಧ ನೀಡಿದ ಸ್ವದೂರನ್ನು ಚಾಸಾ-6 ರವರು ಸ್ವೀಕರಿಸಿ ವಿಶ್ವನಾಥಪುರ ಪೋಲೀಸ್ ಠಾಣೆಯ ಗುನ್ನಾ ಸಂಖ್ಯೆ:38/2015 ನೇದ್ದರಂತೆ ಪ್ರಕರಣ ದಾಖಲಿಸಿ ತನಿಖೆಯನ್ನು ಪೂರ್ಣಗೊಳಿಸಿದ ನಂತರ ಆರೋಪಿತರ ವಿರುದ್ದ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1ಎ), 21, 22 ಮತ್ತು ಭಾ.ದಂ.ಸಂ. ಕಲಂ.379 ರಡಿಯಲ್ಲಿ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**4.** ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿದ ನಂತರ ಆರೋಪಿತರ ವಿರುದ್ದ ಹೊರೆಸಿರುವ ಆರೋಪಗಳನ್ನು ರುಜುವಾತು ಪಡಿಸಲು ಸಾಕ್ಷ್ಯಾಧಾರಗಳು ಇರುವುದರಿಂದ ಆರೋಪಗಳ ಸಂಜ್ಞಾನವನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಅಪರಾಧಿಕ ಪ್ರಕರಣವನ್ನು ದಾಖಲಿಸಿದ್ದು, ನಂತರ ಆರೋಪಿತರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಗೊಳಿಸಿದ ಮೇರೆಗೆ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ನಂತರ ಆರೋಪಿತರಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.207ರ ಅಡಿಯಲ್ಲಿ ನಿರ್ದೇಶಿಸಿರುವಂತೆ ದೋಷಾರೋಪಣಾ ಪಟ್ಟಿಯ ಪ್ರತಿಗಳನ್ನು ಪೂರೈಸಲಾಗಿರುತ್ತದೆ.

**5.** ಪ್ರಸ್ತುತ ಪ್ರಕರಣದಲ್ಲಿ ವಿಶ್ವನಾಥಪುರ ಠಾಣೆಯ ಆರಕ್ಷಕ ಉಪನೀರಿಕ್ಷಕರು ದಂಡ ಪ್ರಕ್ರಿಯೇ ಸಂಹಿತೆ ಕಲಂ 173 ರ ಅಡಿಯಲ್ಲಿ ಆರೋಪಿತರು ಗಣಿ ಮತ್ತು ಖನಿಜ (ಅಭಿವೃದ್ದಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1ಎ), 21, 22 ಮತ್ತು ಭಾ.ದಂ.ಸಂ. ಕಲಂ.379ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ನ್ಯಾಯಾಲಯಕ್ಕೆ ಅಂತಿಮ

ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸ್ವೀಕರಿಸಿದ ನಂತರ ಈ ನ್ಯಾಯಾಲಯವು ಸದರಿ ಅಪರಾಧಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ. ನಂತರ ಪ್ರಸ್ತುತ ಪ್ರಕರಣವನ್ನು ಮಾನ್ಯ ವಿಶೇಷ ನ್ಯಾಯಾಲಯಕ್ಕೆ ಬದ್ಧತೆ(Committal) ಮಾಡಲಾಗಿರುತ್ತದೆ. ಆದರೆ ***ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ತನ್ನ ತೀರ್ಪಾದ ವಿವೇಕ ಮತ್ತು ಇನ್ನೋಬ್ಬರು ವಿರುದ್ಧ ಕರ್ನಾಟಕ ರಾಜ್ಯ (ಪ್ರತಿನಿಧಿಸುವವರು ಕುಣಿಗಲ್ ಪೋಲೀಸ್ ಠಾಣೆ ಮತ್ತು ಇನ್ನೋಬ್ಬರು ಐ.ಎಲ್.ಆರ್ 2018 ಕೆ.ಎ.ಆರ್ 1997) ತೀರ್ಪಿನಲ್ಲಿ ಮತ್ತು ಕಲಂ. 22 ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957 ರಲ್ಲಿ*** **ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ** ***ಯಾವುದೇ ನ್ಯಾಯಾಲಯವು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆಯ ಅಡಿಯಲ್ಲಿನ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಳ್ಳಲು ಬರುವುದಿಲ್ಲ, (ಅಧಿಕೃತನಾದ ಅಧಿಕಾರಿಯಿಂದ ಲಿಖಿತ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸದ ಹೊರತು) ಎಂದು ಸ್ಪಷ್ಟವಾಗಿ ಹೇಳುತ್ತದೆ.*** ಆದ್ದರಿಂದ ಈ ಮೇಲೆ ಹೇಳಿದ ಕಾನೂನಿನ ತೋಡಕಿನಿಂದ ಮಾನ್ಯ ವಿಶೇಷ ನ್ಯಾಯಾಲಯದಿಂದ ಪ್ರಸ್ತುತ ಪ್ರಕರಣದ ಕಡತವನ್ನು ಈ ನ್ಯಾಯಾಲಯಕ್ಕೆ ಮರಳಿ ಕಳುಹಿಸಿರುತ್ತಾರೆ. ಆದ್ದರಿಂದ ನನ್ನ ಪೂರ್ವಸೀನ ನ್ಯಾಯಾಂಗಾಧಿಕಾರಿಯವರು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957 ರ ಕಲಂ 4(1), 4(1ಎ), 21, 22 ರಡಿಯಲ್ಲಿನ ಆರೋಪಣೆಗಳನ್ನು ಕೈಬಿಟ್ಟು ಕೇವಲ ಭಾ.ದಂ.ಸಂ. ಕಲಂ 379 ರ ಅಡಿಯಲ್ಲಿ ಆರೋಪಣೆಗೆ ಮಾತ್ರ ಸಂಜ್ಞೆಯನ್ನು ತೆಗೆದುಕೊಂಡಿರುತ್ತಾರೆ.

**6.** ಅಲ್ಲದೇ ***ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಟೇಟ್ ಎನ್.ಸಿ.ಟಿ ವಿರುದ್ಧ ಸಂಜಯ (ಎಐಆರ್ 2015 ಎಸ್.ಸಿ 75)*** ಈ ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ ಒಂದು ವೇಳೆ ಪೋಲೀಸ್ ಅಧಿಕಾರಿಗಳು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ)

ಕಾಯ್ದೆಯ ಜೊತೆಗೆ ಭಾ.ದಂ.ಸಂ.ಕಲಂ. 378 ಮತ್ತು 379 ರ ಅಡಿಯಲ್ಲಿ ಅಥವಾ ಇತರೆ ದಂಡನಿಯ ಅಪರಾಧಗಳ ಮೇಲೆ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದಾಗ, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂತಹ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಅಪರಾಧಗಳನ್ನು ಹೊರೆತುಪಡಿಸಿ ಉಳಿದ ಅಪರಾಧಗಳಿಗೆ ಸಂಜ್ಞೆಯನ್ನು ತೆಗದುಕೊಳ್ಳಲು ಯಾವುದೇ ನಿರ್ಬಂಧವಿರುವುದಿಲ್ಲ ಮತ್ತು ಪೋಲೀಸ್ ಅಧಿಕಾರಿಗಳು ಸಹ ಅಂತಹ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆಯ ಅಪರಾಧಗಳನ್ನು ಹೊರತುಪಡಿಸಿ ಉಳಿದ ಅಪರಾಧಗಳ ಮೇಲೆ ಪ್ರಕರಣ ದಾಖಲಿಸಿ ತನಿಖೆ ಮಾಡಿ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಯಾವುದೇ ನಿರ್ಬಂಧವಿರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿರುತ್ತದೆ.

**7.** ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ಉಭಯ ಪಕ್ಷಗಾರರ ವಾದವನ್ನು ಆಲಿಸಿರುತ್ತದೆ. ಆದರೆ ನ್ಯಾಯಾಲಯಕ್ಕೆ ಆರೋಪಿತರನ್ನು ದೋಷಾರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡುಬರದ ಕಾರಣ ಮತ್ತು ದೋಷಾರೋಪಣಾ ಪಟ್ಟಿಯಲ್ಲಿ ಆರೋಪಿತರ ವಿರುದ್ದ ಸಾಕಷ್ಟು ಅಂಶಗಳು ಕಂಡು ಬಂದಿದ್ದರಿಂದ ಭಾ.ದಂ.ಸಂ.ಕಲಂ 379 ರ ಅಡಿಯಲ್ಲಿನ ಅಪರಾಧಕ್ಕೆ ದೋಷಾರೋಪಣೆಯನ್ನು ರಚಿಸಲಾಗಿರುತ್ತದೆ.

**8.** ತದನಂತರ ಆರೋಪಿತರ ವಿರುದ್ದ ರಚಿಸಲಾದ ಭಾ.ದಂ.ಸಂ. ಕಲಂ.379ರ ಅಡಿಯಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದಾಗ ಆರೋಪಿತರು ತನ್ನ ಮೇಲೆ ಹೊರೆಸಿರುವ ಆರೋಪಗಳು ಸುಳ್ಳು ಎಂದು, ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

**9.** ಅಭಿಯೋಜನೆಯು ಆರೋಪಿತರ ವಿರುದ್ದ ಮಾಡಿರುವ ಆರೋಪವನ್ನು ನಿಸ್ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಒಟ್ಟು 5 ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-5 ಎಂದು ವಿಚಾರಣೆಗೆ ಒಳಪಡಿಸಿರುತ್ತದೆ ಹಾಗೂ ತಮ್ಮ ಪರವಾಗಿ ಒಟ್ಟು 5 ದಾಖಲೆಗಳನ್ನು ನಿಪಿ-1 ರಿಂದ ನಿಪಿ-5 ಎಂದು ನಿಶಾನೆಗೊಳಪಡಿಸಿರುತ್ತದೆ.

**10.** ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯು ಮುಕ್ತಾಯಗೊಂಡ ನಂತರ ಅಭಿಯೋಜನೆಯ ಸಾಕ್ಷ್ಯದಲ್ಲಿ ಆರೋಪಿತರಿಗೆ ಪ್ರತಿಕೂಲವಾಗಿರುವ ಅಂಶಗಳನ್ನು ಓದಿ, ಹೇಳಿ ಅಪರಾಧಿಕ ಪ್ರಕ್ರಿಯೇ ಸಂಹಿತೆ 1973 ರ ಕಲಂ.313 ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತದೆ. ಆರೋಪಿತರು ತಮ್ಮ ಹೇಳಿಕೆಯಲ್ಲಿ ಅಭಿಯೋಜನೆಯ ಪರ ಸಾಕ್ಷ್ಯ ನುಡಿದ ಸಾಕ್ಷಿದಾರರ ಹೇಳಿಕೆಯನ್ನು ಸುಳ್ಳೆಂದು ಅಲ್ಲಗೆಳೆದಿದ್ದು ಹಾಗೂ ತಮ್ಮ ಪರವಾಗಿ ಯಾವುದೇ ಪ್ರತಿರಕ್ಷೆ ಸಾಕ್ಷ್ಯವಿರುವುದಿಲ್ಲ ಎಂದು ಹೇಳಿರುತ್ತಾರೆ.

**11.** ಪ್ರಕರಣದ ವಿಚಾರಣೆಯ ತರುವಾಯ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದವನ್ನು ಸುನಾವಣೆ ಮಾಡಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಪ್ರಸ್ತುತ ಪ್ರಕರಣಕ್ಕೆ ಸಂಬಂದಪಟ್ಟ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

**12.** ಅಭಿಯೋಜನೆಯು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉಗಮವಾಗಿರುತ್ತವೆ.

## ಅಂಶಗಳು

**ಅಂಶ ಸಂಖ್ಯೆ:1:** ದಿನಾಂಕ: 24-02-2015 ರಂದು ಮದ್ಯರಾತ್ರಿ 12-15 ಗಂಟೆಯ ಸಮಯದಲ್ಲಿ ವಿಶ್ವನಾಥಪುರ ಆರಕ್ಷಕ ಠಾಣಾ ಸರಹದ್ದು, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಮಾಯಸಂದ್ರ ಚಿಕ್ಕಗೊಲ್ಲಹಳ್ಳಿ ರಸ್ತೆ ಸ್ಮಶಾನದ ಬಳಿ ಲಾರಿ ನಂ. ಟಿ.ಎನ್-64-ಬಿ-7434 ವಾಹನದಲ್ಲಿ

ಆರೋಪಿಗಳು ಗ್ರಾವೇಲ್ ಮರಳನ್ನು ತುಂಬಿಕೊಂಡು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಕಳ್ಳತನದಿಂದ ಸಾಗಾಣಿಕೆ ಮಾಡಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379ರ ಅಡಿಯಲ್ಲಿ ದಂಡನಿಯವಾದ ಅಪರಾಧವನ್ನು ಮಾಡಿರುತ್ತಾರೆಂದು, ಅಭಿಯೋಜನೆಯು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ-2: ಏನು ಆದೇಶ?**

**13.** ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಉತ್ತರ ನೀಡಿರುತ್ತದೆ.

**ಅಂಶ 1 : ನಕರಾತ್ಮಕವಾಗಿ**

**ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ**

## ಕಾರಣಗಳು

**14. ಅಂಶ ಸಂಖ್ಯೆಃ 1 :** ಈ ಪ್ರಕರಣದಲ್ಲಿ ಆರೋಪಿತರ ವಿರುದ್ದ ಮಾಡಲಾದ ಆಪಾದನೆಯನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲಿದ್ದು, ಅದಕ್ಕಾಗಿ ಅಭಿಯೋಜನೆಯವರು ಸಾಕಷ್ಟು ನಂಬಲರ್ಹವಾದ ಸಾಕ್ಷ್ಯ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆಯು ಹಾಗೂ ಆರೋಪಿತರ ಮೇಲಿರುವ ಆರೋಪಗಳನ್ನು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲೆ ಇರುತ್ತದೆ.

**15.** ಅದರಂತೆ ಅಭಿಯೋಜನೆಯು ಆರೋಪಿತರು ಭಾ.ದ.ಸಂ. ಕಲಂ.379 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಸಾಬೀತು ಪಡಿಸಲು 5 ಸಾಕ್ಷಿದಾರರನ್ನು

ಪ್ರಾಸಾ-1 ರಿಂದ 5 ಎಂದು ಹಾಗೂ ತಮ್ಮ ಪರವಾಗಿ ಒಟ್ಟು 5 ದಾಖಲೆಗಳನ್ನು ನಿಪಿ-1 ರಿಂದ 5 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**16.** ಆರೋಪಿತರ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಗಣಿ ಮತ್ತು ಖನಿಜ (ಅಭಿವೃದ್ದಿ ಮತ್ತು ನಿಯಂತ್ರಣ) ಕಾಯ್ದೆ ಕಲಂ. 22 ರ ಅಡಿಯಲ್ಲಿ ತನಿಖೆ ಮಾಡಲು ಹಾಗೂ ಕಲಂ 173 ಅಪರಾಧ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಪೋಲೀಸರು ವರದಿಯನ್ನು ಸಲ್ಲಿಸಲು ನಿರ್ಬಂಧಕವಿದೆ ಎಂದು ವಾದ ಮಂಡಿಸಿರುತ್ತಾರೆ. ಆರೋಪಿತರ ಪರ ವಕೀಲರ ವಾದಕ್ಕೆ ಪೂರಕವಾಗಿ ಎಂ.ಎಂ.ಡಿ.ಆರ್ ಕಾಯ್ದೆ ಕಲಂ.22ನ್ನು ವ್ಯಾಖ್ಯಾನಿಸುವುದು ಅವಶ್ಯಕವಾಗಿರುತ್ತದೆ.

**ಕಲಂಃ22 ಆರೋಪಗಳ ಅರಿವುಃ**

***'ಯಾವುದೇ ನ್ಯಾಯಾಲಯವು ಈ ಕಾಯ್ದೆಯ ಅಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಅಪರಾಧ ಅಥವಾ ಇದರ ಅಡಿಯಲ್ಲಿ ಆರೋಪಗಳನ್ನು ಮಾಡಿದಾಗ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತರಾದ ವ್ಯಕ್ತಿಗಳಿಂದ ಲಿಖಿತ ದೂರನ್ನು ಮ್ಯಾಜಿಸ್ಟ್ರೇಟರ್ ಗೆ ಮಾಡದ ಹೊರೆತು ಯಾವುದೇ ನ್ಯಾಯಾಲಯವು ಈ ಕಲಂ ಅಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಳ್ಳಲು ಬರುವುದಿಲ್ಲ ಎಂದು ವ್ಯಾಖ್ಯಾನಿಸಿದೆ'***

ಈ ಮೇಲಿನ ಉಪಬಂಧವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡುಬರುವ ಅಂಶವೇನೆಂದರೆ ಎಂ.ಎಂ.ಡಿ.ಆರ್ ಕಾಯ್ದೆ ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿನ ಶಿಕ್ಷಾರ್ಹ ಅರಿವುಗಳನ್ನು ಸಂಬಂಧಪಟ್ಟ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಅಧಿಕೃತವಾಗಿ ಅಧಿಕಾರವನ್ನು ಪಡೆದ ವ್ಯಕ್ತಿಗಳಿಂದ ಯಾರಾದರೂ ಲಿಖಿತ ಖಾಸಗಿ ದೂರನ್ನು ಮ್ಯಾಜಿಸ್ಟೇಟರಿಗೆ ಸಲ್ಲಿಸತಕ್ಕದ್ದು ಎಂದು ಅದು ಸ್ಪಷ್ಟಪಡಿಸುತ್ತದೆ.

**17.** ***ನಂಬರ್ ಸಿಪಿ 21 ಎಂ.ಎಂ.ಎನ್ (2) 2014 , ಬೆಂಗಳೂರು ದಿನಾಂಕಃ 21-01-2014ರ*** ಅಧಿಸೂಚನೆಯ ಪ್ರಕಾರ ಪೋಲೀಸ್ ಆರಕ್ಷಕರು ಮತ್ತು ಆರಕ್ಷಕ ಉಪನಿರೀಕ್ಷಕರು

ತಮ್ಮ ಹುದ್ದೆಯ ಮೂಲಕ ಅಧಿಕೃತ ಅಧಿಕಾರಿಗಳಾಗಿರುತ್ತಾರೆ. ಆದರೆ ಎಂ.ಎಂ.ಆರ್.ಡಿ ಕಾಯ್ದೆಯ ಕಲಂ 22 ನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಯಾವುದೇ ಅಧಿಕೃತವಾದ ಅಧಿಕಾರಿಯ ಅಂದರೆ ಅಧಿಸೂಚನೆಯ ಮೇರೆಗೆ ಈ ಕಾಯ್ದೆಯಡಿಯಲ್ಲಿ ಅಧಿಕಾರವನ್ನು ಪಡೆದುಕೊಂಡಂತಹ ಅಧಿಕಾರಿಯು ನ್ಯಾಯಾಲಯದಲ್ಲಿ ಲಿಖಿತ ಖಾಸಗಿ ದೂರನ್ನು ಸಲ್ಲಿಸಿದಲ್ಲಿ ಮಾತ್ರ ನ್ಯಾಯಾಲಯವು ಸಂಜ್ಞೆಯನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿದ್ದು ಅದನ್ನು ಹೊರತುಪಡಿಸಿದ ಸಂದರ್ಭದಲ್ಲಿ ಯಾವುದೇ ನ್ಯಾಯಾಲಯವು ಎಂ.ಎಂ.ಡಿ.ಆರ್ ಕಾಯ್ದೆಯ ಕಲಂಗಳ ಅಥವಾ ಯಾವುದೇ ನಿಯಮಗಳ ಅಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಅಪರಾಧಗಳ ಸಂಜ್ಞೆಯನ್ನು ತೆಗೆದುಕೊಳ್ಳಲು ಬರುವುದಿಲ್ಲವೆಂದು ಹೇಳುತ್ತದೆ.

**18.** ದೂರು ಎಂದರೆ ಏನು ಎಂದು ದಂಡ ಪ್ರಕ್ರಿಯಾ ಸಂಹಿತೆ ಕಲಂ 2 (ಡಿ) ನಲ್ಲಿ ವ್ಯಾಖ್ಯಾನಿಸಲಾಗಿದೆ ಅದು ಈ ಕೆಳಗಿನಂತೆ ವ್ಯಾಖ್ಯಾನಿಸಿದೆ.

> ***ವ್ಯಾಖ್ಯಾನಗಳು ಕಲಂ 2(ಡಿ) : ದೂರು ಎಂದರೆ ಯಾವುದೇ ಒಬ್ಬ ಗೊತ್ತಿದ್ದ ವ್ಯಕ್ತಿಯಾಗಲಿ, ಇಲ್ಲವೇ ಗೊತ್ತಿಲ್ಲದ ವ್ಯಕ್ತಿಯಾಗಲಿ, ಒಂದು ಅಪರಾಧವನ್ನು ಎಸಗಿರುವನೆಂಬ ಅಪಾದನೆಯನ್ನು ಬಾಯಿಮಾತಿನಿಂದಲೇ ಆಗಲಿ, ಲಿಖಿತದಲ್ಲಾಗಲಿ, ದಂಡಾಧಿಕಾರಿಯೊಬ್ಬರಿಗೆ, ಅಂತಹ ದಂಡಾಧಿಕಾರಿಯು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ, ಆ ಬಗ್ಗೆ ಕ್ರಮ ಕೈಗೊಳ್ಳಬೇಕೆಂಬ ಉದ್ದೇಶದಿಂದ ಮಾಡುವುದು. ಆದರೆ ಪೋಲಿಸ್ ವರದಿಯನ್ನು ಅದು ಒಳಗೊಂಡಿರುವುದಿಲ್ಲ'.***

ಮೇಲೆ ಹೇಳಲಾದ ಉಪಬಂಧವನ್ನು ಅವಲೋಕಿಸಿದಾಗ, '**ದೂರು**' ಎಂದರೆ, ಮ್ಯಾಜಿಸ್ಟ್ರೇಟರ್ ಗೆ ಮೌಖಿಕವಾಗಿ ಅಥವಾ ಲಿಖಿತವಾಗಿ ಮಾಡಿದ ಯಾವುದೇ ಒಂದು ಆರೋಪ, ಆದರೆ ಈ ಪ್ರಕರಣದಲ್ಲಿ ಆರೋಪಿತರು ಅಕ್ರಮವಾಗಿ ಮರಳನ್ನು ಲಾರಿಯಲ್ಲಿ

ಸಾಗಿಸುತ್ತಿದ್ದರೆಂದು ಆರೋಪಿಸಿ ನ್ಯಾಯಾಲಯದ ಮುಂದೆ ಯಾವುದೇ ಅಧಿಕೃತ ವ್ಯಕ್ತಿ ಖಾಸಗಿ ದೂರು ದಾಖಲಿಸಿರುವುದಿಲ್ಲ.

19. ***ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ವಿವೇಕ್ ಮತ್ತು ಇನ್ನೊಬ್ಬರು ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಕುಣಿಗಲ್ ಪೋಲಿಸ್ ಠಾಣೆ, ಐ.ಎಲ್.ಆರ್ 2018 ಕೆ.ಎ.ಆರ್ 1497*** ರಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮತ್ತು ವಿಶೇಷ ನ್ಯಾಯಾಲಯಗಳು ಗಮನದಲ್ಲಿಟ್ಟುಕೊಳ್ಳಲು ಕೆಲವು ಮಾರ್ಗಸೂಚಿಗಳನ್ನು ನೀಡಿದೆ. ಸದರಿ ತೀರ್ಪಿನ ಕಂಡಿಕೆ 37 ರಲ್ಲಿ ಈ ಕೆಳಗಿನಂತೆ ಗಮನಿಸಲಾಗಿದೆ.

> ***ಕಂಡಿಕೆಃ 37: ಎಂ.ಎಂ.ಡಿ.ಆರ್ ಕಾಯ್ದೆಯಲ್ಲಿ ರಚಿಸಲಾದ ವಿಶೇಷ ನ್ಯಾಯಾಲಯವು, ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಕೆ.ಎಂ.ಎಂ.ಸಿ ನಿಯಮಗಳ ಅಡಿಯಲ್ಲಿ ಯಾವುದೇ ನಿಯಮಗಳ ಅಡಿಯಲ್ಲಿ ನೇರವಾಗಿ ಅಪರಾಧಗಳ ಸಂಜ್ಞೆಯನ್ನು ತೆಗೆದುಕೊಳ್ಳಲು ಯಾವುದೇ ನ್ಯಾಯಾಲಯ ಯಾವುದೇ ಇತರ ದಂಡ ಅಪರಾಧಗಳ ಜೊತೆಗೆ ನ್ಯಾಯಾಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯದಿಂದ ಪ್ರಕರಣವನ್ನು ಒಪ್ಪಿಸದ ಹೊರತು, ವಿಶೇಷ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ ಕಲಂ 173 ರ ಅಡಿಯಲ್ಲಿ ಪೋಲಿಸರಿಂದ ಅಂತಿಮ ವರದಿಯನ್ನು ಸ್ವೀಕರಿಸಲು ಅಥವಾ ಎಂ.ಎಂ.ಡಿ.ಆರ್ ಕಾಯ್ದೆಯ ಅಡಿಯಲ್ಲಿ ಯಾವುದೇ ಖಾಸಗಿ ದೂರನ್ನು ಅಧಿಕೃತ ಅಧಿಕಾರಿಯಿಂದ ನೇರವಾಗಿ ಸ್ವೀಕರಿಸಲು ಮತ್ತು ಅಪರಾಧಗಳ ಅರಿವನ್ನು ಪಡೆಯಲು ಯಾವುದೇ ಅಧಿಕಾರವನ್ನು ಹೊಂದಿಲ್ಲ ಎಂದು ಸ್ಪಷ್ಟಪಡಿಸಿರುತ್ತದೆ. ಎಂ.ಎಂ.ಡಿ.ಆ ಕಾಯ್ದೆ ಅಥವಾ ಯಾವುದೇ ಇತರ ಕಾನೂನುಗಳು ಅಂತಹ ಯಾವುದೇ ದೂರನ್ನು ತಪ್ಪಾಗಿ ಸ್ವೀಕರಿಸಿದರೆ ಮತ್ತು ಬಾಕಿ ಉಳಿದಿದ್ದರೆ ವಿಶೇಷ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ ಕಲಂ 201 ರ ಅಡಿಯಲ್ಲಿ ಪರಿಗಣಿಸಿದಂತೆ ಕಾರ್ಯ ವಿಧಾನವನ್ನು ಅನುಸರಿಸಬೇಕು ಮತ್ತು ಆ ಪರಿಣಾಮದ ಅನುಮೋದನೆಯೊಂದಿಗೆ ಸರಿಯಾದ ನ್ಯಾಯಾಲಯಕ್ಕೆ ಪ್ರಸ್ತುತಿಗಾಗಿ ದೂರನ್ನು ಹಿಂತಿರುಗಿಸಬೇಕು.***

*(2). ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಕೆ.ಎಂ.ಎಂ.ಸಿ ನಿಯಮಗಳ ಆಡಿಯಲ್ಲಿನ ಅಪರಾಧಗಳಿಗಾಗಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 173ರ ಅಡಿಯಲ್ಲಿ ಪೋಲಿಸ್ ಅಂತಿಮ ವರದಿಯನ್ನು ನ್ಯಾಯಾಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯಕ್ಕೆ ಅಥವಾ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲು ಸಾಧ್ಯವಿಲ್ಲ. ಅದಾಗ್ಯೂ, ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಅಪರಾಧಗಳ ವರದಿಯನ್ನು ಅಥವಾ ನ್ಯಾಯ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ಮುಂದೆ ಜಾರಿಯಲ್ಲಿರುವ ಯಾವುದೇ ಇತರ ದಂಡ ಕಾನೂನಿನ ಅಡಿಯಲ್ಲಿ ಸಲ್ಲಿಸಬಹುದು.*

*(3). ದಂಡ ಪ್ರಕ್ರಿಯಾ ಸಂಹಿತೆ ಕಲಂ 173ರ ಅಡಿಯಲ್ಲಿ ಯಾವುದೇ ಪೋಲೀಸ್ ವರದಿ ಆಧಾರದ ಮೇಲೆ ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಕೆ.ಎಂ.ಎಂ.ಸಿ ನಿಯಮಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಸಂಜ್ಞೆಯನ್ನು ತೆಗೆದುಕೊಳ್ಳಲು ನ್ಯಾಯ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರ್ ಗೆ ಯಾವುದೇ ನ್ಯಾಯ ವ್ಯಾಪ್ತಿ ಅಥವಾ ಅಧಿಕಾರವಿರುವುದಿಲ್ಲ, ಆದಾಗ್ಯೂ ಭಾರತೀಯ ದಂಡ ಸಂಹಿತೆಯಲ್ಲಿ ಯಾವುದೇ ದಂಡದ ನಿಬಂಧನೆಗಳು ಅಥವಾ ಯಾವುದೇ ಇತರೆ ದಂಡ ಕಾನೂನುಗಳು ಪೋಲಿಸರ ವರದಿಯಲ್ಲಿ ಲಭ್ಯವಿದ್ದರೆ, ಬೇರ ಯಾವುದೇ ನಿರ್ಭಂಧವಿಲ್ಲದಿದ್ದರೆ, ಎಂ.ಎಂ.ಡಿ.ಆರ್ ಕಾಯ್ದ ಕೆ.ಎಂ.ಎಂ.ಸಿ. ನಿಯಮಗಳ ಅಡಿಯಲ್ಲಿನ ಅಪರಾಧಗಳನ್ನು ಹೊರತುಪಡಿಸಿ, ಮ್ಯಾಜಿಸ್ಟ್ರೇಟರ್ ರವರು ಭಾರತೀಯ ದಂಡ ಸಂಹಿತೆ ಆಥವಾ ಇತರೆ ದಂಡ ಕಾನೂನುಗಳ ಅಡಿಯಲ್ಲಿ ಅಂತಹ ಅಪರಾಧಗಳ ಅರಿವನ್ನು ತೆಗೆದುಕೊಳ್ಳಬಹುದು.*

*(4). ಖಾಸಗಿ ದೂರನ್ನು ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಕೆ.ಎಂ.ಎಂ. ನಿಯಮಗಳ ಅಡಿಯಲ್ಲಿ ಮಾತ್ರ ಪರಿಗಣಿಸಲಾಗಿದೆ ಮತ್ತು ಆದ್ದರಿಂದ ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಕೆ.ಎಂ.ಎಂ.ಸಿ ನಿಯಮಗಳ ಅಡಿಯಲ್ಲಿ ಸಮರ್ಥ ಅಧಿಕೃತ ಅಧಿಕಾರಿಯಿಂದ, ಸದರಿ ಕಾಯ್ದೆಯ ಕಲಂ 22ರ ಅಡಿಯಲ್ಲಿ ಖಾಸಗಿ ದೂರನ್ನು ಸಲ್ಲಿಸಬೇಕು. ಎಂ.ಎಂ.ಡಿ.ಆರ್ ಕಾಯ್ದೆ ಇತರೆ ನಿಯಮಗಳ ಅಡಿಯಲ್ಲಿನ ಬೇರೆ ನಿಯಮಗಳ ಅಂಶಗಳ ಮತ್ತು ನಿಯಮಗಳ ಅಡಿಯಲ್ಲಿನ ಅಪರಾಧಗಳ ಜೊತೆಗೆ ಇತರೆ ಯಾವುದೇ ದಂಡ ಕಾನೂನುಗಳ ಅಡಿಯಲ್ಲಿ ಇತರ ಅಪರಾಧಗಳನ್ನು ಸೇರಿಸಿದರೂ ಸಹ ನ್ಯಾಯ ವ್ಯಾಪ್ತಿ ಹೊಂದಿರುವ*

*ಮ್ಯಾಜಿಸ್ಟ್ರೇಟರ್ ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಕೆ.ಎಂ.ಎಂ.ಸಿ ನಿಯಮಗಳ ಅಡಿಯಲ್ಲಿನ ಅಪರಾಧಗಳನ್ನು ಖಾಸಗಿ ದೂರಿನ ಆಧಾರದ ಮೇಲೆ ಮಾತ್ರ ತೆಗೆದುಕೊಳ್ಳಬೇಕಾಗುತ್ತದೆ. ದಂಡದ ಕಾನೂನುಗಳನ್ನು ಅಧಿಕೃತ ಅಧಿಕಾರಿಯಿಂದ ಸಹ ಅನ್ವಯಿಸಲಾಗುತ್ತದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಗೆ ಸಂಬಂಧಿಸಿದ ನಿಬಂಧನೆಗಳ ಅನುಸರಣೆಯ ನಂತರ ಮ್ಯಾಜಿಸ್ಟ್ರೇಟರ್ ಸಂಪೂರ್ಣ ಪ್ರಕರಣವನ್ನು ವಿಚಾರಣೆಗಾಗಿ ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸಬೇಕಾಗುತ್ತದೆ.*

*(5). ವಿಶೇಷ ನ್ಯಾಯಾಲಯವು ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಕೆ.ಎಂ.ಎಂ.ಸಿ ನಿಯಮಗಳ ಅಡಿಯಲ್ಲಿ ಅಪರಾಧಗಳನ್ನು ವಿಚಾರಣೆ ಮಾಡಲು ನ್ಯಾಯ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರ್ ನ್ಯಾಯಾಲಯಕ್ಕೆ ಪ್ರಕರಣವನ್ನು ವಿಚಾರಣೆ ಒಪ್ಪಿಸಿದ ನಂತರವೇ ಜಾರಿಯಲ್ಲಿರುವ ಯಾವುದೇ ಇತರ ದಂಡ ಕಾನೂನುಗಳ ಅಡಿಯಲ್ಲಿ ಯಾವುದೇ ಇತರ ಅಪರಾಧಗಳನ್ನು ಒಳಗೊಂಡಂತೆ ನ್ಯಾಯ ವ್ಯಾಪ್ತಿಯನ್ನು ಹೊಂದಿರುತ್ತದೆ.*

*(6). ಎಂ.ಎಂ.ಡಿ.ಆರ್ ಕಾಯ್ದೆ ಕಲಂ 22 ರ ಅಡಿಯಲ್ಲಿ ಅಧಿಕೃತ ಅಧಿಕಾರಿಯು ಖಾಸಗಿ ದೂರನ್ನು ಸಲ್ಲಿಸಿದರೆ ಮತ್ತು ಮ್ಯಾಜಿಸ್ಟ್ರೇಟ್ ಆದರ ಸಂಜ್ಞೆಯನ್ನು ತೆಗೆದುಕೊಂಡಿದ್ದರೆ ಮತ್ತು ಖಾಸಗಿ ದೂರಿನ ವಿಚಾರಣೆ ಅಥವಾ ವಿಚಾರಣೆಯ ಸಂದರ್ಭದಲ್ಲಿ ಅದನ್ನು ಅವರು ನಡೆಸಿದ ವಿಚಾರಣೆ ಅಥವಾ ವಿಚಾರಣೆಯ ವಿಷಯವಾಗಿರುವ ಸಂಬಂಧಿಸಿದಂತೆ ಅದೇ ಪ್ರಕರಣದಲ್ಲಿ ಪೋಲಿಸರ ತನಿಖೆಯು ಬಾಕಿ ಉಳಿದಿದೆ ಎಂದು ನಂತರ ಮ್ಯಾಜಿಸ್ಟ್ರೇಟ್ ಅಂತಹ ವಿಚಾರಣೆಯ ಪ್ರಕ್ರಿಯೆಗಳನ್ನು ತಡೆಹಿಡಿಯಬೇಕು ಮತ್ತು ವರದಿಗಾಗಿ ಕರೆ ಮಾಡಬೇಕು. ಪೋಲಿಸರಿಂದ ವಿಷಯ ಮತ್ತು ನಂತರ ಎರಡು ಒಪ್ಪಿಸಬೇಕು. ಪ್ರಕರಣಗಳನ್ನು ವಿಶೇಷ ನ್ಯಾಯಾಲಯಕ್ಕೆ ವಿಚಾರಣೆಗೆ.*

*(7) ಪೋಲಿಸರು ಈಗಾಗಲೇ ಸಿ.ಆರ್.ಪಿ.ಸಿ ಕಾಯ್ದೆ 173ರ ಅಡಿಯಲ್ಲಿ ಎಂ.ಎಂ.ಡಿ.ಆರ್ ಕಾಯ್ದೆ ಯ ಅಡಿಯಲ್ಲಿ ಮತ್ತು ಭಾರತೀಯ ದಂಡ ಸಂಹಿತೆ ಮತ್ತು ಮೋಟಾರು ವಾಹನಗಳ ಕಾಯ್ದೆ, ಇತರ ದಂಡ ಕಾನೂನುಗಳ ಅಡಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ವರದಿಯನ್ನು ಸಲ್ಲಿಸಿದ್ದರೆ, ಎಂ.ಎಂ.ಡಿ.ಆರ್. ಕಾಯ್ದೆ ಮತ್ತು ಕೆ.ಎಂ.ಎಂ.ಸಿ. ನಿಯಮಗಳ ಅಡಿಯಲ್ಲಿನ ಅಪರಾಧಗಳಿಗೆ ಅಧಿಕೃತ*

*ಅಧಿಕಾರಿಯು ಅಪರಾಧಗಳ ಕಲಂ 22 ರ ಪ್ರಕಾರ ಯಾವುದೇ ಖಾಸಗಿ ದೂರನ್ನು ಸಲ್ಲಿಸಿದರೆ, ಅಂತಹ ಪ್ರಕರಣದ ವಿಚಾರಣೆ ಅಥವಾ ವಿಚಾರಣೆಯ ಸಮಯದಲ್ಲಿ ಮ್ಯಾಜಿಸ್ಟ್ರೇಟ್ ಇತರ ದಂಡ ಕಾನೂನುಗಳ ಅಡಿಯಲ್ಲಿ ಅಪರಾಧಗಳ ಅರಿವನ್ನು ತೆಗೆದುಕೊಂಡಿದ್ದರೆ, ಮ್ಯಾಜಿಸ್ಟ್ರೇಟ್ ಎಲ್ಲ ಮುಂದಿನ ಪ್ರಕಿಯೆಗಳಿಗೆ ತಡೆ ನೀಡಬೇಕು ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ಕಲಂ 323 ರ ಪ್ರಕಾರ ಮತ್ತು ಕಲಂ 202 ರ ಅಡಿಯಲ್ಲಿ ಪರಿಗಣಿಸಿದಂತೆ ಕಾರ್ಯ ವಿಧಾನವನ್ನು ಅನುಸರಿಸಿದ ನಂತರ ಎರಡೂ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಕ್ಕೆ ಎರಡು ಪ್ರಕರಣವನ್ನು ಒಪ್ಪಿಸಬೇಕು.*

*(8). ಒಂದೇ ಘಟನೆಗೆ ಸಂಬಂಧಿಸಿದಂತೆ ಮಾರ್ಗ ಸೂಚಿಗಳು 6 ಮತ್ತು 7ರಲ್ಲಿ ನಮೂದಿಸಲಾದ ಪ್ರಕರಣಗಳ ಮೇಲಿನ ವಿಶೇಷ ನ್ಯಾಯಾಲಯವು ಎರಡು ಪ್ರಕರಣಗಳನ್ನು ಸ್ವೀಕರಿಸಿದ ಮೇಲೆ 6 ಮತ್ತು 7ರಲ್ಲಿ ನಮೂದಿಸಲಾದ ಪ್ರಕರಣಗಳ ಸ್ವೀಕೃತಿಯ ಮೇಲಿನ ಮಾನ್ಯ ವಿಶೇಷ ನ್ಯಾಯಲಯವು ಎರಡು ಪ್ರಕರಣಗಳನ್ನು ಒಟ್ಟಿಗೆ ವಿಚಾರಣೆ ಮಾಡಬೇಕು ಕಾನೂನು ಪ್ರಕಾರ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ವಿಚಾರಣೆಯು ಜಾಮೀನಿಗೆ ಸಂಬಂಧಿಸಿದಂತೆ ಮತ್ತು ವಶಪಡಿಸಿಕೊಂಡ ಆಸ್ತಿಗಳ ಮಧ್ಯಂತರ ಪಾಲನೆಗೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟ್‌ನ ನಿಬಂಧನೆಗಳು ಮತ್ತು ಅಧಿಕಾರಗಳನ್ನು ವಿಶೇಷ ನ್ಯಾಯಾಲಯಕ್ಕೆ ಪ್ರಕರಣವನ್ನು ಒಪ್ಪಿಸುವವರೆಗೆ ವಿಚಾರಣೆಯ ಸಮಯದಲ್ಲಿ ಮ್ಯಾಜಿಸ್ಟ್ರೇಟ್ ಬದಲಾಯಿಸಬಹುದು. ಪ್ರಕರಣದ ನಂತರ ವಿಶೇಷ ನ್ಯಾಯಾಲಯವು ವಿಚಾರಣಾ ನ್ಯಾಯಾಲಯವಾಗಿದ್ದು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ನಿಬಂಧನೆಗಳ ಅಡಿಯಲ್ಲಿ ಒದಗಿಸಿದಂತೆ ಜಾಮೀನು ಮತ್ತು ಪ್ರಕರಣದಲ್ಲಿ ಒಳಗೊಂಡಿರುವ ಆಸ್ತಿಗಳ ವಿಲೇವಾರಿ ಕುರಿತು ವಿಶೇಷ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ.*

**20.** ಈ ಪ್ರಕರಣದ ಬಗ್ಗೆ ಚರ್ಚಿಸುವ ಮೊದಲು ಕಲ್ಲು ಮತ್ತು ಮರಳು ಸೇರಿದಂತೆ ಖನಿಜಗಳ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ಶೇಖರಣೆಯಲ್ಲಿ ಎಂ.ಎಂ.ಆರ್.ಡಿ ಕಾಯ್ದೆ ಯ ನಿರ್ಭಂಧದ ವಸ್ತುವು ಪರಿಸರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಎಂಬ ಅಂಶದ ಬಗ್ಗೆ

ನ್ಯಾಯಾಲಯಕ್ಕೆ ಅರಿವಿರುತ್ತದೆ, ಅಲ್ಲದೇ ಅದು ಪರಿಸರ ವಿಜ್ಞಾನದ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುತ್ತದೆ. ಪರಿಸರ ರಕ್ಷಣೆ ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯವಾಗಿರುತ್ತದೆ.

**21.** ಈ ಪ್ರಕರಣದಲ್ಲಿ ಚಾ.ಸಾ-1 ರವರು ನೀಡಿದ ಸ್ವ-ದೂರನ್ನು ಚಾಸಾ-6 ರವರು ಸ್ವಿಕರಿಸಿ ಪ್ರಕರಣ ದಾಖಲಿಸಿ ತನಿಖೆ ಮಾಡಿ ದೋಷಾರೋಪಣಾ ಪಟ್ಟಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ಪ್ರಕರಣವನ್ನು ತನಿಖಾಧಿಕಾರಿಯವರು ಕಲಂ 173 ಅಪರಾಧ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದ್ದು, ಎಂ.ಎಂ.ಡಿ.ಆರ್ ಕಾಯ್ದೆ ಯ ಕಲಂ.22ರ ಕಡ್ಡಾಯ ಉಪಬಂಧದಂತೆ ಖಾಸಗಿ ದೂರನ್ನು ದಾಖಲಿಸಿರುವುದಿಲ್ಲ. ಎಂ.ಎಂ.ಡಿ.ಆರ್ ಕಾಯ್ದೆ ಕಲಂ 22ರ ಮತ್ತು ಎಂ.ಎಂ.ಆರ್.ಸಿ ನಿಯಮದ ಪ್ರಕಾರ ಶಿಕ್ಷಾರ್ಹವಾಗಿರುವ ಯಾವುದೇ ಅಪರಾಧದ ಸಂಜ್ಞೆಯನ್ನು ತೆಗೆಕೊಳ್ಳಬೇಕಾದರೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಅಧಿಕಾರ ಹೊಂದಿರುವ ವ್ಯಕ್ತಿಯಿಂದ ಲಿಖಿತವಾಗಿ ಮಾಡಿದ ದೂರನ್ನು ಹೊರತುಪಡಿಸಿದ ಇತರೆ ರೀತಿ ತನಿಖೆಯನ್ನು ಪೂರೈಸಿ ಸಲ್ಲಿಸಿದ ಅಂತಿಮ ವರದಿಯ ಮೇಲೆ ಸಂಜ್ಞೆ ತೆಗೆದುಕೊಳ್ಳಲು ಬರುವುದಿಲ್ಲವೆಂದು ನ್ಯಾಯಾಲಯದ ಮೇಲೆ ನಿರ್ಭಂದವನ್ನು ಹಾಕಲಾಗಿದೆ.

**22.** ದೂರಿನ ಆಧಾರದ ಮೇಲೆ ಎಂ.ಎಂ.ಡಿ.ಆರ್ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳ ನಡುವಿನ ವ್ಯತ್ಯಾಸವನ್ನು ***ಗೌರವಾನ್ವಿತ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದೆಹಲಿ ರಾಜ್ಯ ವಿರುದ್ಧ ಸಂಜಯ್ ಎ.ಐ.ಆರ್ 2015, ಎಸ್.ಸಿ 75 ರಲ್ಲಿ ವಿಸ್ತೃತವಾಗಿ ವಿವರಿಸಿದೆ.*** ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಕಂಡಿಕೆ 71 ರಲ್ಲಿ ಈ ಕೆಳಕಂಡಂತೆ ಹೇಳಿದೆ.

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ಕಲಂ 173 ರಡಿಯಲ್ಲಿ ಅಂತಿಮ ವರದಿಯನ್ನು ಕಲಂ 190(1)ಬಿ ನಲ್ಲಿ ತಿಳಿಸಿರುವಂತೆ ಸಂಜ್ಞೆಯನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಅಂದರೆ ಸರ್ಕಾರಿ ಭೂಮಿಯಿಂದ ಮರಳು ಮತ್ತು ಜಲ್ಲಿ ಕಲ್ಲು ಕಳ್ಳತನವಾದ ಪ್ರಕರಣದಲ್ಲಿ ಪೋಲಿಸ್ ಪ್ರಕರಣವನ್ನು ದಾಖಲಿಸಿ ತನಿಖೆ ನಡೆಸಬಹುದು ಎಂದು ತಿಳಿಸಿದೆ. ಇದೇ ತೀರ್ಪಿನ ಕಂಡಿಕೆ 72 ರಲ್ಲಿ ರಾಜ್ಯದ ಆಸ್ತಿಯನ್ನು ಒಪ್ಪಿಗೆ ಇಲ್ಲದೇ ನದಿ ಪಾತ್ರದಿಂದ ಮರಳು ಮತ್ತು ಜಲ್ಲಿ ಕಲ್ಲುಗಳನ್ನು ಅಪ್ರಾಣಿಕವಾಗಿ ತೆಗೆಯುವ ಕಾಯ್ದೆ ಮತ್ತು ಪದಾರ್ಥಗಳು ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಒಂದು ವಿಶಿಷ್ಟ ಅಪರಾಧವಾಗಿದೆ ಮತ್ತು ***ಆದ್ದರಿಂದ ಕಲಂ 378 ಭಾರತೀಯ ದಂಡ ಸಂಹಿತೆಯಡಿಯಲ್ಲಿ ಅಪರಾಧಕ್ಕಾಗಿ ಪೋಲಿಸ್ ವರದಿಯ ಸ್ವೀಕೃತಿಯ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟ್ ಅವರು ಸಂಜ್ಞಾವನ್ನು ತೆಗೆದುಕೊಳ್ಳಲು ಅಧಿಕೃತ ಅಧಿಕಾರಿಯಿಂದ ಸಲ್ಲಿಸಬಹುದಾದ ದೂರಿನ ರಶೀದಿಯನ್ನು ನಿರೀಕ್ಷಿಸದೇ ಸದರಿ ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳಬಹುದು*** ಎಂದು ಮಾನ್ಯ ನ್ಯಾಯಾಲಯವು ತೀರ್ಪಿನಲ್ಲಿ ಹೇಳಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲೆ ಹೇಳಿದ ಕಂಡಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಎಂ.ಎಂ.ಡಿ.ಆರ್ ಕಾಯ್ದೆ ಅಡಿಯಲ್ಲಿ ಪೋಲಿಸರು ಸಲ್ಲಿಸಿದ ದೂರಿನ ಆಧಾರದ ಮೇಲೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸಂಜ್ಞೆ ತೆಗೆದುಕೊಳ್ಳುವುದು ಅಸಮರ್ಥನೀಯವೆಂದು ಸ್ಪಷ್ಟವಾಗುತ್ತದೆ, ಆದಾಗ್ಯೂ ಮರಳು ಮತ್ತು ಇತರೆ ಖನಿಜಗಳ ಕಳ್ಳತನ ಪ್ರಕರಣ ದಾಖಲಾಗಿದ್ದರೆ ಮತ್ತು ತನಿಖೆಯ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 173ರ ಅಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದ್ದರೆ, ಕಲಂ. 190(1) ಬಿ. ಪ್ರಕಾರ ಸಂಜ್ಞೆಯನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ ನ್ಯಾಯ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಗೆ ಸಂಜ್ಞೆ ತೆಗೆದುಕೊಳ್ಳುವುದು ಅಸಮರ್ಥನೀಯವಾಗಿದೆ ಎಂದು ತಿಳಿದುಬರುತ್ತದೆ. ಹಾಗೇಯೇ ಎಂ.ಎಂ.ಡಿ.ಆರ್

ಕಾಯ್ದೆಯೊಂದಿಗೆ ಇತರೆ ಅಪರಾಧಗಳನ್ನು ಸೇರಿಸಿದಾಗ ನ್ಯಾಯಾಲಯಕ್ಕೆ ಅಪರಾಧದ ಸಂಜ್ಞೆಯನ್ನು ತೆಗೆದುಕೊಳ್ಳಲು ಅಧಿಕಾರವಿರುತ್ತದೆ.

**23.** ಮೇಲೆ ಚರ್ಚಿಸಿದ ಅಂಶವನ್ನು ಗಮನದಲ್ಲಿರಿಸಿಕೊಂಡು ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಪ್ರಾರಂಭದಲ್ಲಿ ನನ್ನ ಪೂರ್ವನ್ಯಾಯಾಂಗಾಧಿಕಾರಿಯವರು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1ಎ), 21, 22 ಮತ್ತು ಭಾ.ದಂ.ಸಂ. ಕಲಂ.379ರ ಅಡಿಯಲ್ಲಿನ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಂಡಿರುತ್ತಾರೆ, ನಂತರ ನನ್ನ ಪೂರ್ವಸೀನ ನ್ಯಾಯಾಂಗಾಧಿಕಾರಿಯವರು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957 ರ ಕಲಂ. 4(1), 4(1ಎ), 21, 22ರ ಅಪರಾಧಗಳನ್ನು ಹೋರತುಪಡಿಸಿ ಕೇವಲ ಭಾ.ದಂ.ಸಂ. ಕಲಂ.379 ರಡಿಯಲ್ಲಿನ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಂಡಿರುತ್ತಾರೆ. ಆದರೆ ಮೇಲೆ ಚರ್ಚಿಸಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು ಮತ್ತು ಎಂ.ಎಂ.ಡಿ.ಆರ್ ಕಾಯ್ದೆ ಕಲಂ.22ರಲ್ಲಿ ನಮೂದಿಸಿರುವ ನಿಬಂಧನೆಗಳನ್ನು ಗಮನದಲ್ಲಿಟ್ಟುಕೊಂಡು, ನನ್ನ ಪೂರ್ವಸೀನ ನ್ಯಾಯಾಂಗಾಧಿಕಾರಿಯವರು ಆರೋಪಿತರ ವಿರುದ್ಧ ಕೇವಲ ಭಾ.ದಂ.ಸಂ. ಕಲಂ.379 ರಡಿಯಲ್ಲಿನ ಅಪರಾಧಕ್ಕೆ ಮಾತ್ರ ದೋಷಾರೋಪಣೆಯನ್ನು ರಚನೆ ಮಾಡಿರುತ್ತಾರೆ.

**24.** ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿರುವ ಆರೋಪವನ್ನು ನಿಸ್ಸಂದೇಹಾತೀತವಾಗಿ ರುಜುವಾತುಪಡಿಸಲು ಒಟ್ಟು 6 ಸಾಕ್ಷಿದಾರರ ಪೈಕಿ 5 ಸಾಕ್ಷಿದಾರರನ್ನು ಫ್ರಾಸಾ-1 ರಿಂದ 5 ಎಂದು ಸಾಕ್ಷ್ಯ ವಿಚಾರಣೆಗೊಳಪಡಿಸಿರುತ್ತದೆ. ಸದರಿಯವರ ಪೈಕಿ ಈ ಪ್ರಕರಣದ ದಾಳಿಯ ನೇತೃತ್ವ ವಹಿಸಿದ ಅಧಿಕೃತ/ಇಲಾಖಾ ಸಾಕ್ಷಿದಾರರಾದ ಚಾಸಾ-1 ರವರನ್ನು ಫ್ರಾಸಾ-4 ಎಂದು, ಈ ಪ್ರಕರಣದ ದಾಳಿಯ ಕಾಲಕ್ಕೆ ಸ್ಥಳದಲ್ಲಿದ್ದ ಸ್ವತಂತ್ರ, ಪ್ರತ್ಯಕ್ಷ

ಮತ್ತು ಪಂಚನಾಮೆ ಸಾಕ್ಷಿದಾರರಾದ ಚಾಸಾ-3 ಮತ್ತು 4 ರವರನ್ನು ಕ್ರಮವಾಗಿ ಪ್ರಾಸಾ-1 ಮತ್ತು 2 ಎಂದು, ಈ ಪ್ರಕರಣದ ದಾಳಿಯ ಕಾಲಕ್ಕೆ ಸ್ಥಳದಲ್ಲಿದ್ದ ಅಧಿಕೃತ/ಇಲಾಖಾ, ಪ್ರತ್ಯಕ್ಷ ಮತ್ತು ಪಂಚನಾಮೆ ಸಾಕ್ಷಿದಾರರಾದ ಚಾಸಾ-5 ರವರನ್ನು ಪ್ರಾಸಾ-3 ಎಂದು, ಚಾಸಾ-1 ರವರು ನೀಡಿದ ಜ್ಞಾಪನದ ಆದಾರದ ಮೇಲೆ ಆರೋಪಿತರ ವಿರುದ್ಧ ಪ್ರಕರಣದ ದಾಖಲಿಸಿ ಈ ಪ್ರಕರಣದ ಸಂಪೂರ್ಣ ತನಿಖೆ ಕೈಗೊಂಡು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ ಇಲಾಖಾ/ತನಿಖಾಧಿಕಾರಿ ಸಾಕ್ಷಿದಾರರಾದ ಚಾಸಾ-6 ರವರನ್ನು ಪ್ರಾಸಾ-5 ಎಂದು ಅಭಿಯೋಜನೆಯು ವಿಚಾರಣೆಗೊಳಪಡಿಸಿರುತ್ತದೆ.

**25.** ಅಲ್ಲದೇ ಈ ಪ್ರಕರಣದ ದಾಳಿಯ ಕಾಲಕ್ಕೆ ಸ್ಥಳದಲ್ಲಿದ್ದ ಸ್ವತಂತ್ರ, ಪ್ರತ್ಯಕ್ಷ ಮತ್ತು ಪಂಚನಾಮೆ ಸಾಕ್ಷಿದಾರರಾದ ಚಾಸಾ-2 ರವರಿಗೆ ನ್ಯಾಯಾಲಯವು ಅವರ ಹಾಜರಾತಿಯನ್ನು ಪಡೆಯಲು ಹಲವಾರು ಬಾರಿ ಸಮನ್ಸ್, ಬಂಧನ ರಹಿತ ವಾರೆಂಟ್ ಮತ್ತು ಉದ್ಘೋಷಣೆಗಳನ್ನು ಪೋಲಿಸ್ ಉನ್ನತ ಅಧಿಕಾರಿಗಳ ಮೂಲಕ ಹೊರಡಿಸಿದರೂ ಸಹ ಅಭಿಯೋಜನೆ ಮತ್ತು ಪೋಲಿಸರು ಚಾ.ಸಾ-2 ರವರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಸಾಕ್ಷ್ಯ ವಿಚಾರಣೆಗೊಳಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ ನ್ಯಾಯಾಲಯವು ಪ್ರಸ್ತುತ ಪ್ರಕರಣವು ಸುಮಾರು 11 ವರ್ಷಕ್ಕಿಂತ ಹೆಚ್ಚಿನ ಹಳೆಯ ಪ್ರಕರಣವಾಗಿದ್ದು ಸದರಿ ಪ್ರಕರಣವನ್ನು ತೀರ್ಮಾನಿಸುವಲ್ಲಿ ಆಗುವ ವಿಳಂಬವನ್ನು ಹೊಗಲಾಡಿಸುವ ಸಲುವಾಗಿ ಮತ್ತು ಸದರಿ ವಿಳಂಬದಿಂದ ಆರೋಪಿತರಿಗೆ ಆಗುವ ಅನ್ಯಾಯವನ್ನು ಹೊಗಲಾಡಿಸುವ ಸಲುವಾಗಿ ನ್ಯಾಯಾಲಯವು ಚಾ.ಸಾ-2 ರವರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರಡಿಯಲ್ಲಿ ಆರೋಪಿತರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳುವ ಪೂರ್ವದಲ್ಲಿ ಚಾ.ಸಾ-2ರವರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಸಾಕ್ಷ್ಯ ವಿಚಾರಣೆಗೊಳಪಡಿಸಲು ಅಭಿಯೋಜನೆಗೆ ಮತ್ತು ಪೋಲಿಸರಿಗೆ ಸ್ವತಂತ್ರ ನೀಡಿದರೂ ಸಹ ಅಭಿಯೋಜನೆ ಮತ್ತು

ಪೋಲಿಸರು ಚಾ.ಸಾ-2ರವರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಸಾಕ್ಷ್ಯ ವಿಚಾರಣೆಗೊಳಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ ನ್ಯಾಯಾಲಯವು ಚಾ.ಸಾ-2 ರವರನ್ನು ಸಾಕ್ಷ್ಯ ವಿಚಾರಣೆಯಿಂದ ಕೈಬಿಟ್ಟಿರುತ್ತದೆ.

**26.** ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಅವಲೋಕಿಸಿದಾಗ ಹಾಗೂ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿದ ಸಾಕ್ಷಿದಾರರ ಮುಖ್ಯ ವಿಚಾರಣೆ ಮತ್ತು ಪಾಟಿ ಸವಾಲನ್ನು ಕೂಲಂಕೂಷವಾಗಿ ಪರಿಶೀಲಿಸಿ ನೋಡಿದಾಗ ಪ್ರಾಸಾ-3, 4 ಮತ್ತು 5 ರವರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ-1 ಮತ್ತು 2 ರವರು ಈ ಪ್ರಕರಣದಲ್ಲಿ ವಿಚಾರಣೆಗೂಳಪಡಿಸಿದ ಸ್ವತಂತ್ರ, ಪ್ರತ್ಯಕ್ಷ ಮತ್ತು ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ಆದರೆ ಪ್ರಾಸಾ-1 ಮತ್ತು 2ರವರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ-3, 4 ಮತ್ತು 5 ರವರು ಅಧೀಕೃತ/ಇಲಾಖಾ, ಪಿರ್ಯಾಧಿ, ಪ್ರತ್ಯಕ್ಷ, ದಾಳಿಯ ನೇತೃತ್ವ ವಹಿಸಿದ ಮತ್ತು ತನಿಖಾಧಿಕಾರಿ ಸಾಕ್ಷಿದಾರರು ಆಗಿದ್ದು, ಅವರ ಸಾಕ್ಷ್ಯಕ್ಕೆ ಪೂರಕವಾಗಿರುವಂತೆ ಯಾವುದೇ ಒಬ್ಬ ಸ್ವತಂತ್ರ ಮತ್ತು ಪ್ರತ್ಯಕ್ಷ ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಿರುವುದಿಲ್ಲ. ಅಲ್ಲದೇ ಪ್ರಾಸಾ-5 ರವರು ಈ ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ತನಿಖೆಯ ಕಾಲದಲ್ಲಿ ಯಾವೂಬ್ಬ ಸ್ವತಂತ್ರ ಮತ್ತು ಪ್ರತ್ಯಕ್ಷ ಸಾಕ್ಷಿದಾರರನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ವಿಚಾರಣೆಗೊಳಪಡಿಸಿದ ಸ್ವತಂತ್ರ, ಪ್ರತ್ಯಕ್ಷ ಹಾಗೂ ಸ್ಥಳ ಪಂಚನಾಮೆ ಸಾಕ್ಷಿದಾರರಾದ ಪ್ರಾಸಾ-1 ಮತ್ತು 2 ರವರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರಿಂದ ಮುಖ್ಯವಾಗಿ ಕಂಡುಬರುವ ಅಂಶಗಳು ಏನೆಂದರೆ ಪ್ರಾ.ಸಾ-5 ರವರು ಕೇವಲ ಪ್ರಾಸಾ-4 ರವರು ನೀಡಿದ ಜ್ಞಾಪನ ಮತ್ತು ಪಂಚನಾಮೆ ಆಧಾರದ ಮೇಲೆ

ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

**27.** ಯಾವುದೇ ಅಧಿಕೃತ ಸಾಕ್ಷಿದಾರರ ಸಾಕ್ಷ್ಯವನ್ನು ಗಮನಿಸಿಬೇಕಾದರೆ ಮುಖ್ಯವಾಗಿ ಅವರ ಸಾಕ್ಷ್ಯಕ್ಕೆ ಮಹತ್ವ ನೀಡಬೇಕಾದರೆ, ಸದರಿ ಅಧಿಕೃತ/ಇಲಾಖಾ ಅಧಿಕಾರಿಗಳ ಸಾಕ್ಷ್ಯವು ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯಕ್ಕೆ ಪೂರಕವಾಗಿದ್ದರೆ ಮಾತ್ರ ಹೆಚ್ಚಿನ ಮಹತ್ವ ನೀಡಬಹುದಾಗಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಮತ್ತು ತನಿಖಾಧಿಕಾರಿಯವರು ಚಾ.ಸಾ-2 ರಿಂದ 4 ರವರನ್ನು ಸ್ವತಂತ್ರ, ಪ್ರತ್ಯಕ್ಷ ಮತ್ತು ಸ್ಥಳ ಪಂಚನಾಮೆ ಸಾಕ್ಷಿದಾರನ್ನಾಗಿ ದೋಷಾರೋಪಣಾ ಪಟ್ಟಿಯಲ್ಲಿ ಸೇರ್ಪಡೆ ಮಾಡಿದ್ದು, ಆದರೆ ಅವರ ಪೈಕಿ ಚಾ.ಸಾ-3 ಮತ್ತು 4 ರವರನ್ನು ಪ್ರಾಸಾ-1 ಮತ್ತು 2 ಎಂದು ವಿಚಾರಣೆಗೊಳಪಡಿಸಿದ್ದು, ಆದರೆ ಸದರಿಯವರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ ಮತ್ತು ಚಾ.ಸಾ-2 ರವರನ್ನು ಅಭಿಯೋಜನೆಯು ಮತ್ತು ಪೋಲಿಸರು ಈ ಪ್ರಕರಣದ ರುಜುವಾತಿಗಾಗಿ ನ್ಯಾಯಾಲಯದಲ್ಲಿ ಹಾಜರುಪಡಿಸಿ ವಿಚಾರಣೆಗೊಳಪಡಿಸಲು ವಿಫಲವಾಗಿರುತ್ತದೆ.

**28.** ಮುಂದುವರೆದು ಪ್ರಾಸಾ-ಪ್ರಾಸಾ-3, 4 ಮತ್ತು 5 ರವರು ಘಟನಾ ಸ್ದಳದಲ್ಲಿ ಅಕ್ರಮ ಮರುಳು ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಯಾವುದೇ ಭಾವಚಿತ್ರಗಳನ್ನು ಮತ್ತು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಮತ್ತು ಘಟನಾ ಸ್ದಳದಲ್ಲಿ ಮರುಳು ತುಂಬಿದ ಲಾರಿಯನ್ನು ಅಮಾನತ್ತು ಪಡಿಸಿಕೊಂಡಿರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಒಂದು ವೇಳೆ ಅಭಿಯೋಜನೆಯ ಪ್ರಕರಣಕ್ಕೆ ಪ್ರಾಸಾ-3, 4 ಮತ್ತು 5 ರವರು ಹೇಳಿರುವಂತೆ ಘಟನಾ ಸ್ದಳದಲ್ಲಿ ಕಳ್ಳತನದಿಂದ ಅಕ್ರಮ ಗ್ರಾವೇಲ್ ಮರಳು ಸಾಗಾಣಿಕೆ ನಡೆಯುತ್ತಿದ್ದ ಪಕ್ಷದಲ್ಲಿ ಚಾಸಾ-1 ರವರು ಆಗಲೀ

ಅಥವಾ ಪ್ರಾಸಾ-3 ರವರು ಆಗಲೀ ಘಟನಾ ಸ್ದಳದಲ್ಲಿ ಮರಳು ಸಾಗಾಣೀಕೆ ಮಾಡುತ್ತಿದ್ದ ಬಗ್ಗೆ ಭಾವಚಿತ್ರಗಳನ್ನು ತೆಗೆಯಬಹುದಾಗಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಸ್ಥಳದಲ್ಲಿ ಲಾರಿಯನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಆರೋಪಿತರು ಸದರಿ ಸ್ದಳದಲ್ಲಿ ಅಕ್ರಮವಾಗಿ ಕಳ್ಳತನದಿಂದ ಗ್ರಾವೇಲ್ ಮರಳು ಸಾಗಾಣಿಕೆ ನಡೆಸುತ್ತಿದ್ದರೆಂದು ಕೇವಲ ಮೌಖಿಕ ಸಾಕ್ಷ್ಯದ ಆಧಾರದ ಮೇಲೆ ಪ್ರಕರಣ ದಾಖಲು ಮಾಡಲು ಬರುವುದಿಲ್ಲ. ಅಭಿಯೋಜನೆಯು ಸ್ದಳದಲ್ಲಿ ಆರೋಪಿತರೇ ಅಕ್ರಮವಾಗಿ ಕಳ್ಳತನದಿಂದ ಮರಳು ಸಾಗಾಣಿಕೆ ಮಾಡಿರುವುದನ್ನು ಪ್ರತ್ಯಕ್ಷ್ಯವಾಗಿ ನೋಡಿರುವ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ಈ ಒಳಗಾಗಿ ವಿಚಾರಣೆ ಮಾಡಿದ ಸಾಕ್ಷಿದಾರರ ಪೈಕಿ ಆರೋಪಿತರೇ ಘಟನಾ ಸ್ಥಳದಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದರು ಎಂದು ಮತ್ತು ಆರೋಪಿತರನ್ನು ಘಟನಾ ಸ್ಥಳದಲ್ಲಿ ಪ್ರತ್ಯಕ್ಷವಾಗಿ ನೋಡಿದ ಬಗ್ಗೆ ಎಲ್ಲಿಯೂ ಹೇಳಿರುವುದಿಲ್ಲ. ಆದರೆ ಸ್ಥಳದಲ್ಲಿ ಆರೋಪಿತರು ಇದ್ದ ಬಗ್ಗೆ ಮತ್ತು ಸ್ಥಳದಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ನಡೆಸಿ ಕಳ್ಳತನದಿಂದ ಸಾಗಾಣಿಕೆ ಮಾಡಿದ ಬಗ್ಗೆ ಅಭಿಯೋಜನೆಯು ಪುಷ್ಟಿಕೃತವಾದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಆದರೆ ಈ ಪ್ರಕರಣದ ಯಾವೊಬ್ಬ ಸ್ವತಂತ್ರ ಸಾಕ್ಷಿದಾರರು ಆರೋಪಿತರೇ ಸ್ಥಳದಲ್ಲಿದ್ದು ಅಕ್ರಮವಾಗಿ ಕಳ್ಳತನದಿಂದ ಗ್ರಾವೇಲ್ ಮರಳು ಸಾಗಾಣಿಕೆ ಮಾಡುತ್ತಿದ್ದರು ಎಂದು ಎಲ್ಲಿಯೂ ಹೇಳಿರುವುದಿಲ್ಲ. ಅಲ್ಲದೇ ಪ್ರಾಸಾ-5 ರವರು ಘಟನಾ ಸ್ಥಳಕ್ಕೆ ಪ್ರತ್ಯಕ್ಷವಾಗಿ ಭೇಟಿ ನೀಡದೇ, ಘಟನಾ ಸ್ದಳದ ಸ್ಥಳ ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿ ನ್ಯಾಯಾಲಯಕ್ಕೆ ಹಾಜಪಡಿಸಿರುವುದಿಲ್ಲ.

**29.** ಅಲ್ಲದೇ ಪ್ರಾ.ಸಾ-5 ರವರು ಈ ಪ್ರಕರಣದ ತನಿಖಾಧಿಕಾರಿಯವರಾಗಿದ್ದು ತನಿಖೆಯ ಉದ್ದೇಶಕ್ಕಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರನ್ನು ಬರಮಾಡಿಕೊಂಡು ಘಟನಾ

ಸ್ಥಳದ ಪಂಚನಾಮೆಯನ್ನು ಸ್ವತಂತ್ರ ಸಾಕ್ಷಿದಾರರ ಸಮಕ್ಷಮ ಮಾಡಿ ಘಟನಾ ಸ್ಥಳದ ಭಾವಚಿತ್ರಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಪ್ರಾ.ಸಾ-5 ರವರು ಈ ಪ್ರಕರಣದ ರುಜುವಾತಿಗೆ ಅಂತಹ ಯಾವುದೇ ಕಾರ್ಯವನ್ನು ಮಾಡಿರುವುದಿಲ್ಲ. ಅಲ್ಲದೇ ಪ್ರಾ.ಸಾ-5 ರವರು ಕೇವಲ ಚಾಸಾ-1ರವರು ನೀಡಿದ ಜ್ಞಾಪನದ ಆಧಾರದ ಮೇಲೆ ಈ ಪ್ರಕಣದ ಕಡತವನ್ನು ತಯಾರಿಸಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅಲ್ಲದೇ ಪ್ರಾಸಾ-5 ರವರು ತಮ್ಮ ತನಿಖೆ ಕಾಲದಲ್ಲಿ ಆರೋಪಿತರು ಅಪಾಧಿಸಲಾದ ಗ್ರಾವೇಲ್ ಮರಳನ್ನು ಯಾವ ಸ್ಥಳದಿಂದ ತೆಗೆದುಕೊಂಡು ಬಂದಿರುತ್ತಾರೆಂದು ವಿಚಾರಣೆ ಮಾಡಿರುವುದಿಲ್ಲ ಮತ್ತು ಅದನ್ನು ತುಂಬಿಸಿಕೊಂಡು ಬಂದ ಸ್ಥಳಕ್ಕೆ ಸ್ವತಃ ಬೇಟಿ ನೀಡಿ ಪಂಚರನ್ನು ಬರಮಾಡಿಕೊಂಡು ಸ್ಥಳದ ಪಂಚನಾಮೆಯನ್ನು ಸ್ವತಂತ್ರ ಸಾಕ್ಷಿದಾರರ ಸಮಕ್ಷಮ ಮಾಡಿ ಸ್ಥಳದ ಭಾವಚಿತ್ರಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಪ್ರಾ.ಸಾ-5 ರವರು ಈ ಪ್ರಕರಣದ ರುಜುವಾತಿಗೆ ಅಂತಹ ಯಾವುದೇ ಕಾರ್ಯವನ್ನು ಮಾಡಿರುವುದಿಲ್ಲ.

**30.** ಅಲ್ಲದೇ ಅಭಿಯೋಜನೆಯು ಆರೋಪಿತರು ಮಾಯಸಂದ್ರ-ಚಿಕ್ಕಗೊಲ್ಲಹಳ್ಳಿ ರಸ್ತೆ ಸ್ಮಶಾನದ ಬಳಿ ಲಾರಿಯಲ್ಲಿ ಅಕ್ರಮವಾಗಿ ಕಳ್ಳತನದಿಂದ ಗ್ರಾವೇಲ್ ಮರಳನ್ನು ಸಾಗಾಣಿಕೆ ಮಾಡಿರುತ್ತಾರೆಂದು ಆರೋಪಿಸಿರುತ್ತದೆ. ಭಾರತೀಯ ದಂಡ ಸಂಹಿತೆ ಕಲಂ 378 ಮತ್ತು 379ಗಳನ್ನು ಕೂಲಂಕುಷವಾಗಿ ಅವಲೋಕಿಸಿದಾಗ, ಒಂದು ವೇಳೆ ಯಾವುದೇ ಆರೋಪಿತರು ಕಳ್ಳತನ ಮಾಡಿರುತ್ತಾರೆಂದು ಆರೋಪಿಸಲಾದ ಪ್ರಕರಣಗಳಲ್ಲಿ ಆರೋಪಿತರನ್ನು ಶಿಕ್ಷೆಗೆ ಒಳಪಡಿಸಬೇಕಾದರೆ ಕಳ್ಳತನವಾದ ವಸ್ತುಗಳನ್ನು ಮತ್ತು ಕಳ್ಳತನ ಮಾಡಲು ಉಪಯೋಗಿಸಿದಂತಹ ಉಪಕರಣಗಳನ್ನು ಅಮಾನತ್ತುಪಡಿಸಿಕೊಳ್ಳಬೇಕಾಗುತ್ತದೆ. ಅಲ್ಲದೇ ಸದರಿ ಅಮಾನತ್ತು ಪಡಿಸಿಕೊಂಡ ವಸ್ತುಗಳು ಮತ್ತು ಉಪಕರಣಗಳು ಆರೋಪಿತರ ವಿರುದ್ದ

ಆರೋಪಿಸಲಾದ ಪ್ರಕರಣಕ್ಕೆ ಪೂರಕವಾಗಿದ್ದರೆ ಮಾತ್ರ ಅಂತಹ ಪ್ರಕರಣಗಳಲ್ಲಿ ಆರೋಪಿತರನ್ನು ಶಿಕ್ಷೆಗೆ ಗುರಿಪಡಿಸಬಹುದಾಗಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಆರೋಪಿತರು ಅಕ್ರಮವಾಗಿ ಕಳ್ಳತನದಿಂದ ಗ್ರಾವೇಲ್ ಮರಳು ಸಾಗಾಣಿಕೆ ಮಾಡಿರುತ್ತಾರೆಂಬ ಆರೋಪಕ್ಕೆ ಪೂರಕವಾಗಿ ಲಾರಿಯನ್ನು ಹೊರತುಪಡಿಸಿ ಯಾವುದೇ ಗಣಿಗಾರಿಕೆ ಮಾಡಲು ಬೇಕಾಗುವಂತಹ ಉಪಕರಣಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಅಲ್ಲದೆ ಅಮಾನತ್ತುಪಡಿಸಿಕೊಂಡ ಲಾರಿಯಲ್ಲಿ ಮರಳು ಇದ್ದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ದ ಮಾಡಿರುವ ಆರೋಪವನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತದೆ.

**31.** ಅಲ್ಲದೆ ಪ್ರಸ್ತುತ ಪ್ರಕರಣದಲ್ಲಿ ಸ್ಥಳದಲ್ಲಿ ಆರೋಪಿತರ ಮಾಲಿಕತ್ವದ ಲಾರಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆದರೆ ಸದರಿ ಲಾರಿ ಸ್ಥಳದಲ್ಲಿ ಇತ್ತು ಎಂದು ತೋರಿಸಲು ಮತ್ತು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡ ಬಗ್ಗೆ ಯಾವುದೇ ಭಾವಚಿತ್ರಗಳನ್ನು ತೆಗೆದು ಹಾಜರುಪಡಿಸಿರುವುದಿಲ್ಲ. ಬದಲಾಗಿ ಠಾಣೆಯ ಆವರಣದಲ್ಲಿ ಲಾರಿನ ಭಾವಚಿತ್ರಗಳನ್ನು ತೆಗೆದು ಹಾಜರುಪಡಿಸಿರುತ್ತಾರೆ. ಅಲ್ಲದೆ ಒಂದು ವೇಳೆ ಲಾರಿಯಲ್ಲಿ ಅಕ್ರಮವಾಗಿ ಕಳ್ಳತದಿಂದ ಮರಳನ್ನು ತುಂಬಿಸಿ ಸಾಗಾಣಿಕೆ ಮಾಡುತ್ತಿದ್ದ ಪಕ್ಷದಲ್ಲಿ ಸದರಿ ಮರಳನ್ನು ಸಂಬಂಧಪಟ್ಟ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ನೀಡಿ ಅವರಿಂದ ಸದರಿ ಲಾರಿಯಲ್ಲಿರುವ ಮರಳಿನ ಬಗ್ಗೆ ಮತ್ತು ಅದು ಮರಳು ಅಥವಾ ಮಣ್ಣು ಎಂದು ತಿಳಿದುಕೊಳ್ಳಲು ಅವರಿಂದ ಯಾವುದೇ ವರದಿಯನ್ನು ಪಡೆದುಕೊಂಡಿರುವುದಿಲ್ಲ.

**32.** ಒಟ್ಟಾರೆಯಾಗಿ ಪ್ರಾಸಾ-3, 4 ಮತ್ತು 5 ರವರ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಆರೋಪಿತರು ಸದರಿ ಸ್ದಳದಲ್ಲಿ ಅಕ್ರಮವಾಗಿ ಮರಳನ್ನು ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ,

ಮುಖ್ಯವಾಗಿ ಭಾರತೀಯ ದಂಡ ಸಂಹಿತೆ ಕಲಂ.378ರ ಅಡಿಯಲ್ಲಿ ಅಪರಾಧವನ್ನು ರುಜುವಾತುಪಡಿಸಬೇಕಾದರೆ ಕಳ್ಳತನವಾದ ವಸ್ತುಗಳನ್ನು ಮತ್ತು ಕಳ್ಳತನಕ್ಕೆ ಉಪಯೋಗಿಸಿದಂತಹ ಉಪಕರಣಗಳನ್ನು ಅಮಾನತ್ತು ಪಡಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಆರೋಪಿತರು ಅಕ್ರಮವಾಗಿ ಮರಳನ್ನು ಕಳ್ಳತನದಿಂದ ಸಾಗಾಟ ಮಾಡುತ್ತಿದ್ದರು ಎಂದು ಅಭಿಯೋಜನೆಯು ನಿಸ್ಸಂಶಯಾತೀತಾಗಿ ರುಜುವಾತು ಪಡಿಸಲು ಸಂಪೂರ್ಣವಾಗಿ ವಿಫಲಗೊಂಡಿರುತ್ತದೆ. ಆದ್ದರಿಂದ ಸದರಿ ಸಂಶಯದ ಲಾಭವನ್ನು ಆರೋಪಿತರು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ. ಆದ್ದರಿಂದ ಸಂಶಯಗಳ ಲಾಭವನ್ನು ಆರೋಪಿತರಿಗೆ ನೀಡಿ ಅಂಶ 1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**33. ಅಂಶ-2**: ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ.

**ಆದೇಶ**

ದಂಡ ಪ್ರಕಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ 1 ಮತ್ತು 2ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿನ ಆರೋಪದಿಂದ ದೋಷ ಮುಕ್ತಗೊಳಿಸಿ ನಿರ್ದೋಷಿತರೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ.

1 ಮತ್ತು 2ನೇ ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡ್ ಮತ್ತು ಮುಚ್ಚಳಿಕೆಯು ದಂ.ಪ್ರ.ಸಂ ಕಲಂ 437(ಎ) ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ವಾಹನದ ಬಿಡುಗಡೆಗೆ ಸಂಬಂಧಿಸಿದಂತೆ ಈ ನ್ಯಾಯಾಲಯವು ನೀಡಿದ ಮಧ್ಯಂತರ ಆದೇಶವನ್ನು ಶಾಶ್ವತಗೊಳಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರಳಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು, ತಿದ್ದುಪಡಿ ಮಾಡಿ, ನಂತರ ತೆರೆದ ನ್ಯಾಯಾಲಯದಲ್ಲಿ 27ನೇ ಮಾರ್ಚ 2026 ರಂದು ಘೋಷಿಲಾಯಿತು)

**(ಶ್ರೀ.ಕೆಂಚನಗೌಡ ಪಾಟೀಲ)**
2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

## -: ಅನುಬಂಧ :-

**ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

ಚಾಸಾ-3/ಪ್ರಾಸಾ-1 :ವಿಶ್ವನಾಥ ಬಿನ್ ಶಂಕರಪ್ಪ

ಚಾಸಾ-4/ಪ್ರಾಸಾ-2 :ಪುನೀತ್ ಕುಮಾರ್ ಬಿನ್ ನಾರಾಯಣಾಚಾರ್

ಚಾಸಾ-5/ಪ್ರಾಸಾ-3 : ಶ್ರೀ.ಮಲ್ಲಿಕಾರ್ಜುನ್ ಬಿನ್ ನಾರಾಯಣ್

ಚಾಸಾ-1/ಚಾಸಾ-4 : ಮಹೇಶ್ ಕುಮಾರ್ ಬಿನ್ ಶಿವಪ್ಪ

ಚಾಸಾ-6/ಪ್ರಾಸಾ-5 : ಶ್ರೀ.ಸುಧಾಕರ್ ರೆಡ್ಡಿ ಬಿನ್ ಆಂಜನಾ ರೆಡ್ಡಿ

**ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿಪಿ-1 : ಸ್ಥಳ ಮಹಜರ್

ನಿಪಿ-1(ಎ) : ಪ್ರಾಸಾ-1 ರವರ ಸಹಿ

ನಿಪಿ-1(ಬಿ) : ಪ್ರಾಸಾ-2 ರವರ ಸಹಿ

ನಿಪಿ-1(ಸಿ) : ಪ್ರಾಸಾ-4 ರವರ ಸಹಿ

ನಿಪಿ-2 : ಪ್ರಾಸಾ-1 ರವರ ಹೇಳಿಕೆ

ನಿಪಿ-3 : ಪ್ರಾಸಾ-2 ರವರ ಹೇಳಿಕೆ

ನಿಪಿ-4 : ಜ್ಞಾಪನ

ನಿಪಿ-4(ಎ) : ಪ್ರಾಸಾ-4 ರವರ ಸಹಿ

ನಿಪಿ-4(ಬಿ) : ಪ್ರಾಸಾ-5 ರವರ ಸಹಿ

ನಿಪಿ-5 : ಪ್ರ.ವ.ವರದಿ

ನಿಪಿ-5(ಎ) : ಪ್ರಾಸಾ-5 ರವರ ಸಹಿ

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿಃ**

-ಇಲ್ಲ-

**ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

-ಇಲ್ಲ-

**ಆರೋಪಿತರ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

-ಇಲ್ಲ-

**ಆರೋಪಿತರ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿಃ**

-ಇಲ್ಲ-

**(ಶ್ರೀ.ಕೆಂಚನಗೌಡ ಪಾಟೀಲ)**
2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**(ಬಹಿರಂಗ ನ್ಯಾಯಾಲಯದಲ್ಲಿ ತೀರ್ಪನ್ನು ಪ್ರತ್ಯೇಕವಾದ ಆದೇಶದೊಂದಿಗೆ ಘೋಷಿಸಲಾಗಿದೆ.)**

**ಆದೇಶ**

ದಂಡ ಪ್ರಕಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ 1 ಮತ್ತು 2ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿನ ಆರೋಪದಿಂದ ದೋಷ ಮುಕ್ತಗೊಳಿಸಿ ನಿರ್ದೋಷಿತರೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ.

1 ಮತ್ತು 2ನೇ ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡ್ ಮತ್ತು ಮುಚ್ಚಳಿಕೆಯು ದಂ.ಪ್ರ.ಸಂ ಕಲಂ 437(ಎ) ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ವಾಹನದ ಬಿಡುಗಡೆಗೆ ಸಂಬಂಧಿಸಿದಂತೆ ಈ ನ್ಯಾಯಾಲಯವು ನೀಡಿದ ಮಧ್ಯಂತರ ಆದೇಶವನ್ನು ಶಾಶ್ವತಗೊಳಿಸಲಾಗಿದೆ.

**2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವನಹಳ್ಳಿ .**